**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ದಿನಾಂಕ 28 ನೇ ಮಾಹೆ ಜೂನ್ 2023**

**ಸಿ.ಸಿ.3788/2022**

ಪಿರ್ಯಾದುದಾರರು : ರಾಜ್ಯದ ಪರ ಬೆಟ್ಟದಪುರ ಠಾಣಾ ಆರಕ್ಷಕರು

ವಿರುದ್ಧ

ಆರೋಪಿ : ದೇವೇಗೌಡ ಉಃ ಸ್ವಾಮಣ್ಣ
ಉಃಕರಿಕಲ್ ಸ್ವಾಮಣ್ಣ,
ಬಿನ್ ಲೇಟ್ ಸಣ್ಣೇಗೌಡ,
ವಯಸ್ಸು 65 ವರ್ಷ,
ವಾಸಃ ಸುರಗಹಳ್ಳಿ ಗ್ರಾಮ,
ಪಿರಿಯಾಪಟ್ಟಣ ತಾಲ್ಲೂಕು,
ಮೈಸೂರು ಜಿಲ್ಲೆ.

**ದೋಷಾರೋಪಣೆ**

ಶ್ರೀಮತಿ.ಶ್ವೇತ.ಜೆ., *ಬಿ.ಕಾಂ., ಎಲ್.ಎಲ್.ಬಿ*, ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪಿರಿಯಾಪಟ್ಟಣ ಆದ ನಾನು ಆರೋಪಿತರಾದ ನಿಮ್ಮ ಮೇಲೆ ಅಂದರೆ, ಆರೋಪಿತನ ವಿರುದ್ದ ಮಾಡುವ ಆಪಾದನೆ ಏನೆಂದರೆ,

ದಿನಾಂಕ 11.09.2019 ರಂದು ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ, ಪಿರಿಯಾಪಟ್ಟಣ ತಾಲ್ಲೂಕು, ಬೆಟ್ಟದಪುರ ಪೊಲೀಸ್ ಠಾಣಾ ಸರಹದ್ದು, ಸುರಗಳ್ಳಿ ಗ್ರಾಮದಲ್ಲಿ ಆರೋಪಿತನಾದ ನೀವು ಚಾಸಾ.1 ರವರಿಗೆ ವಂಚಿಸುವ ಉದ್ದೇಶದಿಂದ ಗುಜರಿ ವ್ಯಾಪಾರಿಗಳಾದ ಚಾಸಾ.6 ಸಯ್ಯದ್ ನಯಾಜ್ ಅಹಮ್ಮದ್, ಚಾಸಾ.7 ಸಯ್ಯದ್ ಜಾವೇದ್ ಮತ್ತು ಚಾಸಾ.8 ಫಿಕರ್ ಅಹಮ್ಮದ್‌ರವರನ್ನು ಕರೆಸಿ, ಚಾಸಾ.1 ಶ್ರೀಧರಬಾಬು ರವರ ಬಾಬ್ತು TATA HITACHI HYDRAULIC EXCAVATOR, MODEL EX200 LC BH, WITH HD BUCKET/6B] ವಾಹನವನ್ನು ಮಾರಾಟ ಮಾಡಿ ವಂಚಿಸುವ ಉದ್ದೇಶದಿಂದ, ಚಾಸಾ.1 ರವರು ಹೃದಯ ಖಾಯಿಲೆಯಿಂದ ಸತ್ತುಹೋಗಿದ್ದು, ಸದರಿ ಹಿಟಾಚಿಯ ದಾಖಲಾತಿಗಳು ತನ್ನ ಹೆಸರಿನಲ್ಲಿವೆ ಮತ್ತು ಅವುಗಳು ಕಳೆದು ಹೋಗಿವೆ ಎಂದು ಚಾಸಾ.6 ರಿಂದ 8 ರವರಿಗೆ ರೂ.2,40,000/- ವ್ಯಾಪಾರ ಮಾಡಿ, ರೂ 1,65,000/-

ಗಳನ್ನು ಪಡೆದುಕೊಂಡು ಉಳಿದ ರೂ.75,000/- ಗಳಿಗೆ ಕೋಟಾಕ್ ಮಹೀಂದ್ರ ಬ್ಯಾಂಕ್ ನ ಚೆಕ್ ಗೆ ಸಹಿ ಪಡೆದುಕೊಂಡಿರುತ್ತೀರಿ ಮತ್ತು ದಿನಾಂಕ 13.09.2019 ರಂದು ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ ಚಾಸಾ.6 ರಿಂದ 8 ರವರುಗಳಿಂದ ರೂ.75,000/- ಗಳನ್ನು ಪಡೆದುಕೊಂಡು, ರೂ.100/-ಗಳ ಶುದ್ಧ ಕ್ರಯದ ಒಪ್ಪಂದ ಪತ್ರದ ಮುಖಾಂತರ ಮಾರಾಟ ಮಾಡಿ ವಂಚನೆ ಮಾಡಿರುತ್ತೀರಿ, ಆ ಮೂಲಕ ಆರೋಪಿಯಾದ ನೀವು **ಭಾರತ ದಂಡ ಸಂಹಿತೆ ಕಲಂ.420 ರ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಈ ಮೇಲ್ಕಂಡ ದೋಷಾರೋಪಣೆಗೆ ನೀವು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿದ್ದೇನೆ.

**(ಶ್ವೇತ.ಜೆ)**
ಹೆಚ್ಚುವರಿ ಸಿವಿಲ್ ನ್ಯಾಯಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿ,
ಪಿರಿಯಾಪಟ್ಟಣ.